# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 753
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದ್ದವರು)
3. ಉತ್ತರಿಸಬೇಕಾದ ದಿನಾಂಕ : 13-07-2023
4. ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮೆಟ್ರೋ ರೈಲು ನಿಗಮದಿಂದ ಹಾಲಿ ಪೂರ್ಣಗೊಂಡಿರುವ ಮೆಟ್ರೋ ರೈಲು ರೀಚ್ ಎಷ್ಟು; | ಬೆಂಗಳೂರು ಮೆಟ್ರೋ ರೈಲು ನಿಗಮದಿಂದ ಹಾಲಿ ಪೂರ್ಣಗೊಂಡಿರುವ ಮೆಟ್ರೋ ರೈಲು ಯೋಜನೆಯ ಹಂತ-1 ಮತ್ತು ಹಂತ-2ರ ವಿವರಗಳು ಈ ಕೆಳಕಂಡಂತಿದೆ:<br>1. **ಹಸಿರು ಮಾರ್ಗದ** ನಾಗಸಂದ್ರದಿಂದ ಯಲಚೇನಹಳ್ಳಿಯವರೆಗೆ 24.20 ಕಿ.ಮೀ.ಗಳ ಉದ್ದದ ಮಾರ್ಗ.<br>2. **ನೇರಳೆ ಮಾರ್ಗದ** ಬೈಯ್ಯಪ್ಪನಹಳ್ಳಿಯಿಂದ ಮೈಸೂರು ರಸ್ತೆಯವರೆಗೆ 18.10 ಕಿ.ಮೀ.ಗಳ ಉದ್ದದ ಮಾರ್ಗ.<br>3. **ಹಸಿರು ಮಾರ್ಗದ** ಯಲಚೇನಹಳ್ಳಿಯಿಂದ ರೇಷ್ಮೆ ಸಂಸ್ಥೆಯವರೆಗಿನ 6.12 ಕಿ.ಮೀ.ಗಳ ಉದ್ದದ ಮಾರ್ಗ.<br>4. **ನೇರಳೆ ಮಾರ್ಗದ** ಮೈಸೂರು ರಸ್ತೆಯಿಂದ ಕೆಂಗೇರಿವರೆಗಿನ 7.53 ಕಿ.ಮೀ.ಗಳ ಉದ್ದದ ಮಾರ್ಗ.<br>5. **ನೇರಳೆ ಮಾರ್ಗದ** ಕೃಷ್ಣರಾಜಪುರದಿಂದ ವೈಟ್‌ಫೀಲ್ಡ್ (ಕಾಡುಗೋಡಿ)ವರೆಗಿನ 13.71 ಕಿ.ಮೀ.ಗಳ ಉದ್ದದ ಮಾರ್ಗ. |
| ಆ) | ಹಾಲಿ ಪ್ರಗತಿಯಲ್ಲಿರುವ ಮೆಟ್ರೋ ಕಾಮಗಾರಿಗಳ ವಿವರ ಅದಕ್ಕೆ ತಗಲಿರುವ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2, 2ಎ & 2ಬಿರ ಹಾಲಿ ಪ್ರಗತಿಯಲ್ಲಿರುವ ಮೆಟ್ರೋ ಕಾಮಗಾರಿಗಳ ವಿವರ ಕೆಳಕಂಡಂತಿದೆ:<br>1. **ನೇರಳೆ ಮಾರ್ಗ** : ಕೆಂಗೇರಿಯಿಂದ ಚಲ್ಲಘಟ್ಟದವರೆಗಿನ 2.05 ಕಿ.ಮೀ.ಗಳ ಉದ್ದದ ಮಾರ್ಗ.<br>2. **ನೇರಳೆ ಮಾರ್ಗ** : ಬೈಯ್ಯಪ್ಪನಹಳ್ಳಿಯಿಂದ ಕೃಷ್ಣರಾಜಪುರದವರೆಗಿನ 2.10 ಕಿ.ಮೀ.ಗಳ ಉದ್ದದ ಮಾರ್ಗ.<br>3. **ಹಸಿರು ಮಾರ್ಗ** : ನಾಗಸಂದ್ರದಿಂದ ಮಾದವಾರ (ಬಿಐಇಸಿ)ವರೆಗಿನ 3.14 ಕಿ.ಮೀ.ಗಳ ಉದ್ದದ ಮಾರ್ಗ.<br>4. **ಹಳದಿ ಮಾರ್ಗ** : ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗಿನ 19.15 ಕಿ.ಮೀ.ಗಳ ಉದ್ದದ ಮಾರ್ಗ. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | 5. **ಗುಲಾಬಿ ಮಾರ್ಗ** : ಕಾಳೇನ ಅಗ್ರಹಾರದಿಂದ ನಾಗವಾರದವರೆಗಿನ 21.26 ಕಿ.ಮೀ.ಗಳ ಉದ್ದದ ಮಾರ್ಗ.<br>6. **ಹಂತ-2ಎ ನೀಲಿ ಮಾರ್ಗ** : ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೃಷ್ಣರಾಜಪುರದವರೆಗೆ 19.75 ಕಿ.ಮೀ.ಗಳ ಉದ್ದದ ಮಾರ್ಗ.<br>7. **ಹಂತ-2ಬಿ ನೀಲಿ ಮಾರ್ಗ:** ಕೃಷ್ಣರಾಜ ಪುರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ 38.44 ಕಿ.ಮೀ.ಗಳ ಉದ್ದದ ಮಾರ್ಗ.<br>ಹಂತ-2ರ ಯೋಜನೆಗೆ ಜೂನ್-2023 ರವರೆಗೆ ರೂ.26,408.14 ಕೋಟಿಗಳು ವೆಚ್ಚವಾಗಿರುತ್ತದೆ.<br>ಹಂತ-2ಎ & 2ಬಿರ ಯೋಜನೆಗೆ ಜೂನ್ 2023ರವರೆಗೆ ರೂ.4045.09 ಕೋಟಿಗಳು ವೆಚ್ಚವಾಗಿರುತ್ತದೆ. |
| ಇ) | ಬೆಂಗಳೂರಿನಲ್ಲಿ ಹೊಸದಾಗಿ ಎಷ್ಟು ಮೆಟ್ರೋ ರೈಲು ಸ್ಥಾಪಿಸಲು ಯೋಚಿಸಲಾಗಿದೆಯೇ? (ವಿವರ ನೀಡುವುದು) | ಬೆಂಗಳೂರಿನಲ್ಲಿ ಬೆಂಗಳೂರು ಮೆಟ್ರೋ ರೈಲು ನಿಗಮವು ಹಂತ-3 ಮತ್ತು 3ಎ ಯೋಜನೆಯನ್ನು ಸ್ಥಾಪಿಸಲು ಕೈಗೆತ್ತಿಕೊಳ್ಳಲಾಗಿದೆ. ಇದರ ವಿವರ ಈ ಕೆಳಕಂಡಂತಿದೆ:<br>**ಹಂತ-3: (ಹೊರವರ್ತುಲ ರಸ್ತೆ ಪಶ್ಚಿಮ ಮೆಟ್ರೋ)**<br>1. ಕೆಂಪಾಪುರದಿಂದ ಜೆ.ಪಿ. ನಗರ 4ನೇ ಹಂತ 32.15 ಕಿ.ಮೀ.ಗಳ ಮಾರ್ಗ.<br>2. ಹೊಸಹಳ್ಳಿಯಿಂದ ಕಡಬಗೆರೆವರೆಗೆ 12.50 ಕಿ.ಮೀ.ಗಳ ಮಾರ್ಗ.<br>ಪ್ರಸ್ತುತ ವಿಸ್ತೃತಾ ಯೋಜನಾ ವರದಿ (ಡಿಪಿಆರ್) ಯನ್ನು ಕರ್ನಾಟಕ ಸರ್ಕಾರವು ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ.<br>**ಹಂತ-3ಎ: (ಸರ್ಜಾಪುರದಿಂದ ಹೆಬ್ಬಾಳದವರೆಗೆ)**<br>ಸರ್ಜಾಪುರದಿಂದ ಹೆಬ್ಬಾಳದವರೆಗೆ 37 ಕಿ.ಮೀ.ಗಳ ಮಾರ್ಗ. ಪ್ರಸ್ತುತ ವಿಸ್ತೃತಾ ಯೋಜನಾ ವರದಿ (ಡಿಪಿಆರ್) ಯನ್ನು ತಯಾರಿಸಲಾಗುತ್ತಿದೆ. |

ಕಡತ ಸಂಖ್ಯೆ: ನಅಇ 90 ಪಿ.ಆರ್.ಜೆ 2023

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ